

## ಅಂತಿಂಥದ್ದಲ್ಲ **‘ಧಾರವಾಡ ಎಮ್ಮೆ’**

■ **ಡಾ. ವಿ.ಎಸ್. ಕುಲಕರ್ಣಿ**

**ಕೃ**ತಕ ಗರ್ಭಧಾರಣೆ ಭಾರತಕ್ಕೆ ಕಾಲಿಟ್ಟು 60 ವರ್ಷಗಳ ನಂತರವೂ ತಳಿ ಶುದ್ಧತೆ ಕಾಪಾಡಿಕೊಂಡಿರುವ ‘ಧಾರವಾಡ ಎಮ್ಮೆ’ ತಳಿ ಮಾನ್ಯತೆ ಪಡೆದ ರಾಜ್ಯದ ಮೊದಲ ತಳಿಯಾಗಿದೆ.

ಧಾರವಾಡ ಕೃಷಿ ವಿಶ್ವವಿದ್ಯಾಲಯದ ಪಶುವಿಜ್ಞಾನ ವಿಭಾಗವು 1970ರಿಂದ ಧಾರವಾಡ ಎಮ್ಮೆ ತಳಿಗೆ ಮಾನ್ಯತೆ ಪಡೆಯಲು ಪ್ರಯತ್ನ ನಡೆಸುತ್ತಲೇ ಇತ್ತು. ಭಾರತೀಯ ಕೃಷಿ ಅನುಸಂಧಾನ ಸಂಸ್ಥೆಯ ಅಂಗ ಸಂಸ್ಥೆಯಾದ ಪಶು ವಂಶವಾಹಿ ಸಂಪನ್ಮೂಲ ಸಂರಕ್ಷಣೆಯ ರಾಷ್ಟ್ರೀಯ ಸಂಸ್ಥೆ (ಎನ್‌ಬಿಎಆರ್‌ಜಿ) ಹಾಗೂ ಕೃಷಿ ವಿವಿಯ ಪಶು ವಿಜ್ಞಾನ ವಿಭಾಗದ ಸಹಯೋಗದಲ್ಲಿ ಸಂಶೋಧನೆ ನಡೆದಿದೆ.

ಈವರೆಗೂ ಜಾಗತಿಕ ಮನ್ನಣೆ ದೊರೆತ ದೇಶದ 14 ಎಮ್ಮೆ ತಳಿಯ ಸಾಲಿಗೆ ಧಾರವಾಡ ಎಮ್ಮೆ ಹೊಸ ಸೇರ್ಪಡೆ ಆಗಿದೆ. ಉತ್ತರ ಕರ್ನಾಟಕ ಭಾಗದಲ್ಲಿ ಒಟ್ಟು 12.05ಲಕ್ಷ ಧಾರವಾಡಿ ತಳಿಯ ಎಮ್ಮೆಗಳು ಇರಬಹುದು ಎಂದು ಅಂದಾಜು ಮಾಡಲಾಗಿದೆ.

‘ಒಂದು ಎಮ್ಮೆ ತನ್ನ ಜೀವಿತಾವಧಿಯಲ್ಲಿ ಐದು ಬಾರಿ ಕರು ಹಾಕಲಿದೆ. ಒಂದು ಸೂಲಿನಲ್ಲಿ 335 ದಿನ ಹಾಲು ನೀಡಲಿದೆ. ಇದರ ಹಾಲಿನಲ್ಲಿ ಶೇ. 7ರಷ್ಟು ಕೊಬ್ಬಿನಾಂಶ ಇದೆ. ಹೀಗಾಗಿ ಈ ಭಾಗದ ಸುಪ್ರಸಿದ್ಧ ಸಿಹಿ ತಿಂಡಿಗಳಾದ ಧಾರವಾಡ ಪೇಢಾ, ಬೆಳಗಾವಿ ಕುಂದಾ, ಜಮಖಂಡಿ ಕರ್ದಂಟು ಕಲ್ಲಿ ಪೇಡಾ, ಐನಾಪುರ ಪೇಡಾ, ಗೋಕಾಕ ಮತ್ತು ಅಮೀನಗಡ ಕರದಂಟು ಇತ್ಯಾದಿಗಳು ಈ ಎಮ್ಮೆ ಹಾಲಿನಿಂದಲೇ ತಯಾರಿಸಲ್ಪಡುತ್ತಿವೆ. ಹೀಗಾಗಿ ಇದೊಂದು ಅತ್ಯಂತ ಅಪರೂಪದ ಹಾಲಿನ ತಳಿಯ ಎಮ್ಮೆ ಎಂದೆನಿಸಿಕೊಂಡಿದೆ.

ಧಾರವಾಡದ ಹೃದಯಭಾಗದಲ್ಲಿರುವ ಕರ್ನಾಟಕ ವಿದ್ಯಾವರ್ಧಕ ಸಂಘದ ಪಾರಂಪರಿಕ ಕಟ್ಟಡ ಅದೇ ವಿನ್ಯಾಸದಲ್ಲಿ ನವೀಕರಣಗೊಂಡಿದೆ. ಸಂಘದ ಸದಸ್ಯರ ಭಾವಚಿತ್ರ, ಸುಸಜ್ಜಿತ ಗ್ರಂಥಾಲಯ, ಸಭಾಗೃಹಗಳಿವೆ. ಹಲವಾರು ದತ್ತಿನಿಧಿಯ ಅಡಿಯಲ್ಲಿ ಕನ್ನಡ ಸಾಹಿತ್ಯ ಮತ್ತು ಸಾಂಸ್ಕೃತಿಕ ವಿಷಯಗಳ ಕುರಿತು ನಿತ್ಯ ಇಲ್ಲಿ ಉಪನ್ಯಾಸ, ಕಾರ್ಯಕ್ರಮಗಳು ಜರುಗುತ್ತಿರುತ್ತವೆ.

**(38ನೇ ಪುಟ ನೋಡಿ)**



ಧಾರವಾಡದ ಕರ್ನಾಟಕ ವಿದ್ಯಾವರ್ಧಕ ಸಂಘದ ನವೀಕರಣಗೊಂಡ ಕಟ್ಟಡದ ನೋಟ....